ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	೨೨೧೪
ಸದಸ್ಯರ ಹೆಸರು	:	ಶ್ರೀ ಬಸವರಾಜ್ ರಾಯರೆಡ್ಡಿ (ಯಲಬುರ್ಗಾ)
ಉತ್ತರಿಸುವ ಸಚಿವರು	:	ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಯವರು)

ಕ್ರ.ಸಂ. ಪ್ರಶ್ನೆ

ಅ) ೨೦೦೪-೦೫ನೇ ಸಾಲಿನಲ್ಲಿ ರಾಜ್ಯ ಸರ್ಕಾರದ ಯೋಜನಾ ಹಾಗೂ ಯೋಜನೇತರ ವೆಚ್ಚವೆಷ್ಟು ಹಾಗೂ ಈ ಯೋಜನಾ ವೆಚ್ಚಕ್ಕೆ ಕೇಂದ್ರ ಸರ್ಕಾರದ ಯೋಜನಾ ಆಯೋಗ ಒಪ್ಪಿಗೆ ನೀಡಿದೆಯೇ?

ಉತ್ತರ

೨೦೦೪-೦೫ನೇ ಸಾಲಿನ ಯೋಜನಾ ವೆಚ್ಚ (ಪರಿಷ್ಕೃತ) ರೂ. ೧೧೭೪೧.೧೭ ಕೋಟಿಗಳು. ಪರಿಷ್ಕೃತ ಯೋಜನಾ ವೆಚ್ಚವನ್ನು ಯೋಜನಾ ಆಯೋಗದ ಅನುಮೋದನೆಗೆ ಕಳುಹಿಸಲಾಗಿದ್ದು, ಯೋಜನಾ ಆಯೋಗದ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ. ೨೦೦೪-೦೫ನೇ ಸಾಲಿನ ಪರಿಷ್ಕೃತ ಯೋಜನೇತರ ಅಂದಾಜುಗಳ ರೂ. ೨೫೨೨೦.೧೭ ಕೋಟಿಗಳು.

ಕ್ರ.ಸಂ. ಪ್ರಶ್ನೆ

ಆ) ಯೋಜನಾ ವೆಚ್ಚದಲ್ಲಿ ೨೦೦೪-೦೫ನೇ ಸಾಲಿಗೆ ನಿಗಧಿ ಪಡಿಸಿರುವ ಹಣವೆಷ್ಟು ಹಾಗೂ ಬಿಡುಗಡೆ ಮಾಡಿದ, ಖರ್ಚಾದ ಹಣವೆಷ್ಟು ? (ಇಲಾಖಾವಾರು ನೀಡುವುದು)

ಉತ್ತರ

೨೦೦೪-೦೫ನೇ ಸಾಲಿನಲ್ಲಿ ಯೋಜನಾ ವೆಚ್ಚ (ಪರಿಷ್ಕೃತ)ದಲ್ಲಿ ರೂ. ೧೧೭೪೧.೧೭ ಕೋಟಿಗಳನ್ನು ವೆಚ್ಚ ಮಾಡುವ ನಿರೀಕ್ಷೆ ಇದೆ. ೨೦೦೪-೦೫ನೇ ಸಾಲಿನಲ್ಲಿ (ಜನವರಿ ೨೦೦೫ರವರೆಗೆ) ಮಾಡಲಾದ ವಾಸ್ತವಿಕ ವೆಚ್ಚ ರೂ. ೬೦೬೪.೨೩ ಕೋಟಿಗಳು. ವಲಯವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಇಲಾಖೆಗಳು ಆರ್ಥಿಕ ಅಧಿಕಾರಗಳ ಪ್ರತ್ಯಾಯೋಜನೆಯ ಮೇರೆಗೆ ವೆಚ್ಚವನ್ನು ಮಾಡಲಿವೆ ಮತ್ತು ೨೦೦೪-೦೫ನೇ ಸಾಲಿನ ಅಂತಿಮ ವೆಚ್ಚವನ್ನು

ಮಹಾಲೇಖಪಾಲರು ೨೦೦೪-೦೫ರ ಆರ್ಥಿಕ ವರ್ಷದ ಮುಕ್ತಾಯದ ನಂತರ ಸಂಕಲನ ಮಾಡಲಿರುವರು. ಆದ್ದರಿಂದ ಬಿಡುಗಡೆ ಮಾಡಲಾದ ಮೊತ್ತ ಮತ್ತು ಮಾಡಲಾದ ವೆಚ್ಚ ಇವು ಆರ್ಥಿಕ ವರ್ಷದ ಮುಕ್ತಾಯದ ನಂತರ ತಿಳಿದುಬರುವುದು.

ಕ್ರ.ಸಂ.	ಪ್ರಶ್ನೆ
ಇ)	ಈ ಯೋಜನಾ ವೆಚ್ಚದಲ್ಲಿ ಕೇಂದ್ರ ಸರ್ಕಾರದ ಹಾಗೂ ರಾಜ್ಯ ಸರ್ಕಾರದ ಪಾಲೆಷ್ಟು ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರ ಸಂಪೂರ್ಣ ಹಣವನ್ನು ಬಿಡುಗಡೆ ಮಾಡಿದೆಯೇ?

ಉತ್ತರ

ಈ ಯೋಜನಾ ವೆಚ್ಚದಲ್ಲಿ ಕೇಂದ್ರ ಸರ್ಕಾರದ ಪಾಲು ರೂ. ೧೫೫೭.೦೨ ಕೋಟಿಗಳು ಮತ್ತು ರಾಜ್ಯ ಸರ್ಕಾರದ ಪಾಲು ರೂ. ೪೭೧.೮೪ ಕೋಟಿಗಳು. ಕೇಂದ್ರದ ಪಾಲಿನಲ್ಲಿ ಕೇಂದ್ರ ಸರ್ಕಾರವು ೨೦೦೫ನೇ ಜನವರಿವರೆಗೆ ರೂ. ೧೧೪೪.೬೪ ಕೋಟಿಗಳನ್ನು ಬಿಡುಗಡೆ ಮಾಡಿದೆ. ಈ ಮೊತ್ತವು ರಾಜ್ಯ ಖಜಾನೆಗೆ ಜಮೆಯಾದ ನಂತರ, ಕೇಂದ್ರದ ಪಾಲನ್ನು ರಾಜ್ಯದ ಅನುರೂಪ ಪಾಲಿನೊಂದಿಗೆ ಇಲಾಖೆಗಳಿಗೆ ಬಿಡುಗಡೆ ಮಾಡಲಾಗುವುದು.

ANNEXURE

ಅನುಬಂಧ

(Rs. in Cr.) (ರೂ. ಕೋಟಿಗಳಲ್ಲಿ)

Sl.No. ಕ್ರಮ ಸಂಖ್ಯೆ	Sector ವಲಯ	State Plan Outlay ರಾಜ್ಯ ಯೋಜನಾ ವೆಚ್ಚ	Expenditure upto the end of Jan. 2005 ಜನವರಿ ೨೦೦೫ರ ಅಂತ್ಯಕ್ಕೆ ವೆಚ್ಚ
೧	೨	೩	೪
1.	Agriculture and Allied Activities ಕೃಷಿ ಮತ್ತು ಕೃಷಿಗೆ ಸಂಬಂಧಪಟ್ಟ ಚಟುವಟಿಕೆಗಳು	೮೦೧.೦೧	೪೫೩.೯೩
2.	Rural Development ಗ್ರಾಮೀಣ ಅಭಿವೃದ್ಧಿ	೫೫೪.೪೫	೨೨೭.೮೮
3.	Special Area Programme ವಿಶೇಷ ಪ್ರದೇಶ ಕಾರ್ಯಕ್ರಮ	೪೯.೮೦	೩೪.೮೨
4.	Irrigation and Flood Control ನೀರಾವರಿ ಮತ್ತು ಪ್ರವಾಹ ನಿಯಂತ್ರಣ	೩೨೮೨.೪೬	೨೦೪೯.೫೦
5.	Energy ಇಂಧನ	೧೬೨೯.೪೦	೪೯೩.೩೪
6.	Industry and Minerals ಉದ್ಯಮ ಮತ್ತು ಖನಿಜಗಳು	೧೪೨.೨೭	೩೯.೨೫
7.	Transport ಸಾರಿಗೆ	೧೬೬೪.೦೫	೨೩೯.೪೨
8.	Science Technology and Environment ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ	೧೧.೨೯	೫.೭೭

9.	General Economic Services ಸಾಮಾನ್ಯ ಆರ್ಥಿಕ ಸೇವೆಗಳು	೨೫೧.೩೭	೫೯.೫೭
10.	Education, Sports, Arts and Culture ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ	೯೫೫.೪೬	೫೪೯.೩೮
11.	Health and Family Welfare ಆರೋಗ್ಯ ಮತ್ತು ಕುಟುಂಬ ಕಲ್ಯಾಣ	೧೫೭.೩೨	೯೬.೬೦
12.	Water Supply, Sanitation, Housing and Urban Development ನೀರು ಪೂರೈಕೆ, ನೈರ್ಮಲ್ಯ ವಸತಿ ಮತ್ತು ನಗರಾಭಿವೃದ್ಧಿ	೧೬೩೧.೫೪	೧೦೩೭.೬೨
13.	Information and Publicity ವಾರ್ತಾ ಮತ್ತು ಪ್ರಚಾರ	೨.೩೭	೧.೧೭
14.	Welfare of Scheduled Castes, Scheduled Tribes and Other Backward Classes ಹರಿಜನ, ಗಿರಿಜನ ಮತ್ತು ಇತರೆ ಹಿಂದುಳಿದ ವರ್ಗಗಳ ಕಲ್ಯಾಣ	೩೨೪.೪೭	೧೬೧.೪೪
15.	Labour and Labour Welfare ಕಾರ್ಮಿಕ ಮತ್ತು ಕಾರ್ಮಿಕ ಕಲ್ಯಾಣ	೨೧.೯೧	೧೪.೧೪
16.	Social Welfare and Nutrition ಸಮಾಜ ಕಲ್ಯಾಣ ಮತ್ತು ಪೌಷ್ಟಿಕ ಆಹಾರ	೧೩೪.೨೪	೭೭.೯೧
17.	Other Social Services ಇತರೆ ಸಾಮಾಜಿಕ ಸೇವೆಗಳು	೧೧೯.೨೪	೪೨.೪೪
	Total (ಒಟ್ಟು)	**೧೧೭೪೧.೧೭**	**೬೦೬೪.೨೨**

ಶ್ರೀ ಬಸವರಾಜ್ ರಾಯರೆಡ್ಡಿ (ಮುಂದು) : ಆದರೆ ಅದು ಡಿವೈಡ್ ಮಾಡಿದ

ಪ್ರಕಾರ ೧೧,೭೪೧ ಕೋಟಿ ಎಂದು ಹೇಳಿದ್ದೀರಿ. ಅಂದರೆ ೫೭೧ ಕೋಟಿ ರೂಪಾಯಿ ಕಡಿಮೆಯಾಯಿತು. ೨೦೦೪-೦೫ನೇ ಸಾಲಿನಲ್ಲಿ ನಿಮ್ಮ ಯೋಜನಾ ವೆಚ್ಚ ಸುಮಾರು ೫೭೧ ಕೋಟಿ ರೂಪಾಯಿ ಕಡಿಮೆಯಾಯಿತು. ಏಕೆ ಕಡಿಮೆಯಾಯಿತು? ಹಾಗೂ ೨೦೦೪-೦೫ನೇ ಸಾಲಿನಲ್ಲಿ ಯೋಜನಾ ವೆಚ್ಚವನ್ನು ಯೋಜನಾ ಆಯೋಗಕ್ಕೆ ಕಳುಹಿಸಿದ್ದು, ಇದೂವರೆಗೂ ಕೂಡ ಅನುಮೋದನೆ ನೀಡಿಲ್ಲವೆಂದು ಹೇಳಿದಿರಿ. ಈಗ ವಾರ್ಷಿಕ ವರ್ಷ ಮುಗಿಯಬೇಕಾದರೆ ಇನ್ನೆರಡು ದಿವಸಗಳು ಮಾತ್ರ ಉಳಿದಿವೆ. ಆದುದರಿಂದ ಆ ಯೋಜನಾ ವೆಚ್ಚಕ್ಕೆ ಯಾವಾಗ ಅನುಮೋದನೆ ಯೋಜನಾ ಆಯೋಗದಿಂದ ಸಿಗುತ್ತದೆ? ಅನುಮೋದನೆ ಸಿಗದೆ ಇದ್ದರೆ ಅದರಿಂದ ಆಗುವಂತಹ ಪರಿಣಾಮವೇನು? ಇನ್ನು ಮೂರನೆಯದಾಗಿ ೧೧,೭೪೧ ಕೋಟಿ ರೂಪಾಯಿ ಯೋಜನಾ ವೆಚ್ಚಕ್ಕೆ ಜನವರಿಯೊಳಗೆ ಬಿಡುಗಡೆ ಮಾಡಿದ್ದು ೬,೦೬೪ ಕೋಟಿ ರೂಪಾಯಿ ಮಾತ್ರ. 53% of the money has been released. ಇನ್ನು ೪೭ ಪರ್ಸೆಂಟ್ ಹಣ ಬಿಡುಗಡೆಯಾಗಬೇಕು. ಇನ್ನು ೫೬೭೭ ಕೋಟಿ ರೂಪಾಯಿ ಬಿಡುಗಡೆಯಾಗಬೇಕು. ಇನ್ನು ಎರಡು ತಿಂಗಳಲ್ಲಿ ಹೆಚ್ಚು ಕಡಿಮೆ ೫೬೭೭ ಕೋಟಿ ರೂಪಾಯಿ ಬಿಡುಗಡೆ ಮಾಡಬೇಕು.

ಅಧ್ಯಕ್ಷರು : ತಾವು ಪ್ರಶ್ನೆಗಳನ್ನು ಕೇಳಿ.

ಶ್ರೀ ಬಸವರಾಜ್ ರಾಯರೆಡ್ಡಿ : ಪ್ರಶ್ನೆಯನ್ನೇ ಕೇಳುತ್ತಿದ್ದೇನೆ, ಹಣವನ್ನು ಬಿಡುಗಡೆ ಮಾಡುತ್ತಿದ್ದೀರಿ ಹೇಗೆ ಎಂದು ಕೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಬಜೆಟಿನ ಯೋಜನಾ ಗಾತ್ರ ೧೨,೩೨೨ ಕೋಟಿ ೯೨ ಲಕ್ಷ ರೂಪಾಯಿ. ಅದರಲ್ಲಿ ನಾವು ೧೧೭೪೧.೧೨ ಕೋಟಿ ರೂಪಾಯಿ ಮಾರ್ಚ್ ಕೊನೇವರೆಗೂ ಖರ್ಚು ಆಗುತ್ತದೆಂದು ಅಂದಾಜು ಮಾಡಿದ್ದೇವೆ. ಅವರ ಪ್ರಶ್ನೆ ಏನೆಂದರೆ ನೀವು ೧೨೩೨೨ ಕೋಟಿ ರೂಪಾಯಿ ಹೇಳಿದ್ದು, ಈಗ ೧೧೭೪೧ ಕೋಟಿ ರೂಪಾಯಿ ಎಂದು ಹೇಳುತ್ತಿದ್ದೀರಿ ಎಂದು ಹೇಳಿದರು.

Sri Basavaraj Rayareddy: Plan size has come down.

ಶ್ರೀ ಸಿದ್ದರಾಮಯ್ಯ : ಇರಲಿ, ನೀವು ಇಷ್ಟು ಜೋರಾಗಿ ಇಂಗ್ಲಿಷ್‌ನಲ್ಲಿ ಹೇಳಿಬಿಟ್ಟರೆ ಹೇಗೆ? ಅದು ಪ್ಲಾನ್ ಕಟ್ ಮಾಡಿರುವುದಿಲ್ಲ, ಎಕ್ಸ್‌ಟ್ರನಲ್ ಏಡೆಡ್ ಪ್ರಾಜೆಕ್ಟ್‌ಗಳು ಇವೆಯಲ್ಲ, ವರ್ಲ್ಡ್ ಬ್ಯಾಂಕ್, ಎಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್, ಆ ಸ್ಕೀಂಗಳಲ್ಲಿ ಸಂಬಂಧಪಟ್ಟ ಇಲಾಖೆಗಳಲ್ಲಿ ನಾವು ಎಷ್ಟು ನಿಗದಿ ಮಾಡಿರುತ್ತೇವೆ ಅಷ್ಟು ಹಣ ಖರ್ಚು ಮಾಡಿರುವುದಿಲ್ಲ ಹಾಗಾಗಿ ೬೦೦ ಕೋಟಿ ಚಿಲ್ಲರೆ ಹಣ ಏನಿದೆ, ಅದು ಆ ಕಾರಣಕ್ಕಾಗಿ ಕಡಿಮೆಯಾಗಿರುವುದು. ದುಡ್ಡು ಬಿಡುಗಡೆಯಾಗದೆ ಇರುವಂತಹ ಕಾರಣಕ್ಕೆ ಅದು

ಕಡಿಮೆಯಾಗಿಲ್ಲ. ಇದು ಮಾನ್ಯ ಸದಸ್ಯರ ಮೊದಲನೆ ಪ್ರಶ್ನೆಗೆ ಉತ್ತರ. ಇನ್ನು ಎರಡನೆಯದಾಗಿ ೧೧೭೪೧೧ ಕೋಟಿ ರೂಪಾಯಿ ರಿವೈಜ್ ಎಸ್ಟಿಮೇಟ್‌ನಲ್ಲಿ ಬೇಕಾಗುತ್ತದೆಂದು ಹೇಳಿದ್ದೀರಿ, ಆದರೆ ಇನ್ನು ಅದಕ್ಕೆ ೬೦೬೪ ಕೋಟಿ ರೂಪಾಯಿ ಮಾತ್ರ ಬಡುಗಡೆ ಮಾಡಲಾಗಿದೆ ಎಂದು ಹೇಳಿದಿರಿ. ಅದು ಡಿಸೆಂಬರ್ ಅಂತ್ಯದವರೆಗೆ ಆಗಿರತಕ್ಕಂಥ ವೆಚ್ಚ. ಕೇಂದ್ರ ಸರ್ಕಾರದಿಂದ ಬರತಕ್ಕಂಥ ಹಣ ಸಾಮಾನ್ಯವಾಗಿ ಜನವರಿ, ಫೆಬ್ರವರಿ ಹಾಗೂ ಮಾರ್ಚ್ ತಿಂಗಳಲ್ಲಿ ಬರುತ್ತದೆ. ಹಾಗಾಗಿ ಹೆಚ್ಚು ಖರ್ಚು ಜನವರಿ, ಫೆಬ್ರವರಿ ಹಾಗೂ ಮಾರ್ಚ್‌ನಲ್ಲಿ ಕೇಂದ್ರ ಸರ್ಕಾರದಿಂದ ಬರತಕ್ಕಂಥ ಹಣಕ್ಕೆ ಮ್ಯಾಚಿಂಗ್ ಗ್ರಾಂಟ್ ನಾವು ಕೊಡುವುದರಿಂದ ಬರುತ್ತದೆ. ಆದುದರಿಂದ ಜನವರಿ, ಫೆಬ್ರವರಿ ಹಾಗೂ ಮಾರ್ಚ್‌ನಲ್ಲಿ ಖರ್ಚಾಗುತ್ತದೆ. ನಾವೇನು ೧೧೭೪೧೧ ಕೋಟಿ ರೂಪಾಯಿ ಎಂದು ಮಾರ್ಚ್‌ನೊಳಗೆ ಬೇಕಾಗುತ್ತದೆಂದು ಅಂದಾಜು ಮಾಡಿದ್ದೇವೆ, ಅಷ್ಟು ಹಣ ಖರ್ಚಾಗುತ್ತದೆ. ಎನ್ನುವ ವಿಚಾರವನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಇನ್ನೊಂದು ವಿಚಾರ ಮಾನ್ಯ ಸದಸ್ಯರು ಕೇಳಿರುವುದೇನೆಂದರೆ, ನೀವು ಕೇಂದ್ರ ಸರ್ಕಾರದ ಯೋಜನಾ ಆಯೋಗದ ಒಪ್ಪಿಗೆಗೆ ಕಳುಹಿಸಿದ್ದೀರಿ ಎಂದಿದ್ದಾರೆ. ಈಗ ನಾವು ಮಾರ್ಚ್ ತಿಂಗಳೊಳಗೆ ಎಷ್ಟು ಹಣ ಖರ್ಚಾಗುತ್ತದೆಂದು ಕರಾರುವಕ್ಕಾಗಿ ಹೇಳುವುದಕ್ಕಾಗುವುದಿಲ್ಲ. ಎ.ಜಿ.ಯವರಿಂದ ಆಡಿಟ್ ಆಗಿ ಬರುವುದು ಏಪ್ರಿಲ್ ಮೇ ತಿಂಗಳಿನಲ್ಲಿ, ಆದರೆ ಅಪ್ರೂವಲ್ ಮಾರ್ಚ್ ತಿಂಗಳಿನಲ್ಲಿ ಕೊಟ್ಟೇ ಕೊಡುತ್ತಾರೆ. which is a practice ಪ್ಲಾನಿಂಗ್ ಕಮಿಷನ್‌ಗೆ ನಾವು ಎಷ್ಟು ಖರ್ಚು ಮಾಡಿದ್ದೇವೆ ಎಂದು ಕಳುಹಿಸಿದ ಮೇಲೆ ಅವರು ಅನುಮೋದನೆ ಕೊಟ್ಟೇ ಕೊಡುತ್ತಾರೆ. ಆದುದರಿಂದ ಅನುಮೋದನೆ ಕೊಡದೆ ಇದ್ದರೆ ಅದರ ಪರಿಣಾಮ ಏನಾಗುತ್ತದೆ ಎಂದು ಏನು ಕೇಳಿದ್ದೀರಿ, ಅದಕ್ಕೆ ಯಾವ ಪರಿಣಾಮ ಕೂಡ ಆಗುವುದಿಲ್ಲ. ಅವರು ಒಪ್ಪಿಗೆ ಕೊಟ್ಟೆ ಕೊಡುತ್ತಾರೆ.

ಶ್ರೀ ಬಸವರಾಜ್ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಉಪ ಮುಖ್ಯಮಂತ್ರಿಗಳು ಡಿಸೆಂಬರ್ ಅಂತ್ಯದವರೆಗೆ ೬೦೬೪ ಕೋಟಿ ರೂಪಾಯಿ ಬಡುಗಡೆ ಮಾಡಿದ್ದಾರೆ ಹಾಗೂ ಉಳಿದ ೫೬೭೭ ಕೋಟಿ ರೂಪಾಯಿಯನ್ನು ಈ ಮೂರು ತಿಂಗಳಲ್ಲಿ ಬಡುಗಡೆ ಮಾಡುತ್ತೀರ? ಈ ಮೂರು ದಿವಸದೊಳಗಾಗಿ ಎಲ್ಲಾ ಹಣ ಬಡುಗಡೆ ಮಾಡುತ್ತೀರ?

ಶ್ರೀ ಸಿದ್ಧರಾಮಯ್ಯ: ಮೂರು ತಿಂಗಳೊಳಗೆ ಅಷ್ಟು ಬಡುಗಡೆ ಮಾಡುತ್ತೇವೆ. ಅದರಲ್ಲಿ ಒಂದು ರೂಪಾಯಿ ಕಡಿಮೆ ಮಾಡುವುದಿಲ್ಲ. ಅದಕ್ಕಿಂತ ಇನ್ನು ಹೆಚ್ಚಾಗಿ ಖರ್ಚಾಗುತ್ತದೆ.